ಪಡೆದುಕೊಂಡು ಔಷಧಿಯನ್ನು ಸರಬರಾಜು ಮಾಡದೆ ಬಿಲ್ಲಗಳನ್ನು ಡ್ರಾ ಮಾಡಿರತಕ್ಕ ಅವ್ಯವಹಾರ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದ್ದರೂ ಕೂಡ ಅದರ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಮಾನ್ಯ ಆರೋಗ್ಯ ಸಚಿವರು ನಾನು ಹೇಳುವುದನ್ನು ಗಮನಿಸಬೇಕು. ಅಲ್ಲಿ ಕಾರ್ಯದರ್ಶಿಯಾಗಿರತಕ್ಕ ಎಸ್. ರಾಮಯ್ಯ, ಅಂದಾನಯ್ಯ ಅವರು ಈ ದಂಧೆಯಲ್ಲಿ ಭಾಗವಹಿಸಿದ್ದಾರೆ. ಅದರಲ್ಲಿ ಕೆಲವು ಫಾರ್ಮಸಿಸ್ಟ್‌ಗಳು ಕೂಡ ಷಾಮೀಲಾಗಿ ಔಷಧಿ ಸರಬರಾಜು ಮಾಡದೆ ಖೋಟಾ ಬಿಲ್ಲುಗಳನ್ನು ಖಾಸಗಿಯವರಿಂದ ತೆಗೆದುಕೊಂಡು ಬಂದು ಬಿಲ್ಲುಗಳನ್ನು ತೋರಿಸಿ ಲಕ್ಷಾಂತರ ರೂಪಾಯಿಗಳ ಹಣವನ್ನು ಪಡೆದುಕೊಂಡಿದ್ದಾರೆ. ಆದ್ದರಿಂದ ಅವರುಗಳನ್ನು ಅಮಾನತ್ತುಗೊಳಿಸಬೇಕೆಂದು ಮಾನ್ಯ ವಿ. ಸೋಮಣ್ಣನವರು ಕೂಡ ಹಿಂದೆ, ಅವರು ಶಾಸಕರಾಗಿದ್ದಾಗ ಸಂಬಂಧಪಟ್ಟ ಮಂತ್ರಿಗಳಿಗೆ ಪತ್ರ ಬರೆದಿದ್ದಾರೆ. ಇಷ್ಟಾದರೂ ಕೂಡ ಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಅವರುಗಳ ಮೇಲೆ ಕ್ರಿಮಿನಲ್ಕೇಸನ್ನು ದಾಖಲು ಮಾಡಿ ಅವರುಗಳನ್ನು ಅಮಾನತ್ತುಗೊಳಿಸಿ ಅವರನ್ನು ಬಂಧಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಸಿ. ಮಹಾದೇವಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ವಿಚಾರವನ್ನು ಈಗ ತಾನೇ ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅವರಲ್ಲಿರತಕ್ಕ ಮಾಹಿತಿಗಳನ್ನು ಒದಗಿಸಿಕೊಟ್ಟರೆ ವಿಕ್ಟೋರಿಯಾ ಆಸ್ಪತ್ರೆ ವೈದ್ಯಕೀಯ ಮಂತ್ರಿಗಳಿಗೆ ಬರುತ್ತದೆ. ಅವರ ಗಮನಕ್ಕೂ ಈ ವಿಚಾರವನ್ನು ತಂದು ಸೂಕ್ತಕ್ರಮವನ್ನು ಕೈಗೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಪತಿಯವರೇ, ಅವರು ಇಬ್ಬರು ಎಕ್ಸೈಸ್ ಡಿಪಾರ್ಟಮೆಂಟ್ ಅಧಿಕಾರಿಗಳನ್ನು ಕೂಡಲೇ ಅಮಾನತ್ತಿನಲ್ಲಿಡಬೇಕು, ಕ್ರಿಮಿನಲ್ ಕಕ್ಷೆಗೆ ಕೊಡಬೇಕು ಎನ್ನುವ ವಿಚಾರವನ್ನು ಏನು ಎತ್ತಿದ್ದಾರೆ, ಆ ವಿಚಾರವನ್ನು ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

ಊ) ಕೆ.ಆರ್. ಪೇಟೆ ನಗರಸಭೆಯ ಅಧ್ಯಕ್ಷರ ಚುನಾವಣೆಯನ್ನು ಬೇಗ ನಡೆಸುವುದರ ಕುರಿತು

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಸಭಾಧ್ಯಕ್ಷರೇ, ಕೆ.ಆರ್. ಪೇಟೆಯ ನಗರ ಪಂಚಾಯತಿ ಚುನಾವಣೆ ನಡೆದಿರತಕ್ಕಂಥಾದ್ದು 19.6.96ರಂದು ಅದರ ರಿಸಲ್ಟ್ ಅನೌನ್ಸ್ ಆಗಿರತಕ್ಕಂಥಾದ್ದು 20.6.96ರಂದು. ಅದರ ಪ್ರೆಸಿಡೆಂಟ್ ಎಲೆಕ್ಷನ್ ಎಂದು ಹೇಳಿ 19.7.96ರಕ್ಕೆ ಫಿಕ್ಸ್ ಆಗಿದ್ದನ್ನು ಮೂರು ಸಾರಿ ಮುಂದೂಡತಕ್ಕಂಥ ಒಂದು ಪ್ರಯತ್ನವಾಗಿದೆ. ಅದನ್ನು ಯಾವ ಕಾರಣಕ್ಕೋಸ್ಕರ ಮುಂದೂಡಿದ್ದಾರೆ ಎಂಬುದು ಯಾವುದರಲ್ಲೂ ಪ್ರಯತ್ನವಾಗಿದೆ. ಅದನ್ನು ಯಾವ ಕಾರಣಕ್ಕೋಸ್ಕರ ಮುಂದೂಡಿದ್ದಾರೆ ಎಂಬುದು ಯಾವುದರಲ್ಲೂ ಕಾಣುತ್ತಿಲ್ಲ. ಇಲ್ಲಿ ಸರ್ಕಾರದವರು ಹೊರಡಿಸಿರತಕ್ಕಂಥ ಆಜ್ಞೆ ಕೂಡ ಇದೆ. ವಿಧಾನಸೌಧದಿಂದ ಆಜ್ಞೆಯನ್ನು ಮಾಡಿ ಅದನ್ನು ಮುಂದೂಡತಕ್ಕಂಥ ಕೆಲಸವನ್ನು ಏಕೆ ಮಾಡಿದ್ದಾರೆ ಎಂದು ಅರ್ಥವಾಗುತ್ತಿಲ್ಲ. ಇದು ಯಾವುದೇ ಕಾರಣವನ್ನೂ ಕೂಡ ಕೊಡದೆ ಮುಂದೂಡಿರತಕ್ಕಂಥಾದ್ದು. ಇದಕ್ಕೆ ಒಂದು ಕಾರಣ ಎಂದರೆ, ಇವತ್ತು ಅವರ ಪಡಳಿತ ಪಕ್ಷಕ್ಕೆ ಸೇರಿದವರು ಅಧ್ಯಕ್ಷರಾಗಲಿಲ್ಲ ಎನ್ನುವಂಥ ಕಾರಣಕ್ಕೆ ಈ ಚುನಾವಣೆಯನ್ನು ಮುಂದೂಡಿದ್ದಾರೆ ಎನ್ನುವಂಥಾದ್ದು ನಮ್ಮ ಆರೋಪ ಇದೆ. ದಯಮಾಡಿ ಯಾವ ಕಾರಣಕ್ಕೋಸ್ಕರ ಮುಂದೂಡಿದ್ದಾರೆಂಬುದನ್ನು ತಿಳಿಸಬೇಕೆಂಬುದು

ಒಂದು ಒತ್ತಾಯ ಮತ್ತು ಆದಷ್ಟು ಬೇಗ ಆ ಚುನಾವಣೆಯನ್ನು ನಡೆಸಬೇಕು ಎಂಬ ಒತ್ತಾಯ ಮಾಡಿ ಸರ್ಕಾರದಿಂದ ಹೇಳಿಕೆಯನ್ನು ಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ನಾನು ಕಳೆದ ಹತ್ತು ದಿವಸಗಳಿಂದ ಎರಡು ಸಲ ಗಮನ ಸೆಳೆಯುವ ಸೂಚನೆಗೆ ಪ್ರಯತ್ನ ಮಾಡಿದೆ.

ಅಧ್ಯಕ್ಷರು : ಏನು ಮಾಡುವುದು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮೊನ್ನೆ ಕೂಡ ನಿಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಂಡಿದ್ದೆ. ಅಧ್ಯಕ್ಷರೇ, ಇಲ್ಲಿ ಚುನಾವಣೆಯಾಗಿದೆ. ಯಾವುದೋ ರಾಜಕೀಯ ಕಾರಣಕ್ಕೋಸ್ಕರ ಅಧ್ಯಕ್ಷ ಚುನಾವಣೆಗೆ ಮೂರು ಬಾರಿ ಕರೆದು ನೀವು ಮುಂದೂಡುವುದಾದರೆ ಇದು ಸರ್ಕಾರಕ್ಕೆ ಶೋಭೆ ತರುತ್ತದೆಯೇ? ದಯಮಾಡಿ ಇದು ದೀರ್ಘವಾಗಿ ಚರ್ಚೆ ಮಾಡಬೇಕಾದಂಥ ವಿಷಯ. ಈಗ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರಿಗೆ ಬಹುಮತ ಇದೆಯೋ ಅವರು ಅಧ್ಯಕ್ಷರಾಗುತ್ತಾರೆ. ಅದಕ್ಕೆ ಏಕೆ ಅಡ್ಡಿ ಮಾಡುವುದಕ್ಕೆ ಹೋಗುತ್ತೀರಿ. ಈ ಚುನಾವಣೆಯನ್ನು ಮೂರು ಬಾರಿ ವಿನಾಕಾರಣ ಮುಂದೂಡಿದ್ದೀರಿ. ಇದು ನಿಮ್ಮ ಸರ್ಕಾರಕ್ಕೆ ಶೋಭೆ ತರುವಂಥಾದ್ದಲ್ಲ. ಇವತ್ತು ಒಂದು ದಿನಾಂಕವನ್ನು ನಿಶ್ಚಯ ಮಾಡಿ ಚುನಾವಣೆಯನ್ನು ನಡೆಸಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೇ, ಈ ಚುನಾವಣೆಯನ್ನು ಮುಂದೂಡಿದ್ದರ ಬಗ್ಗೆ ಮಾನ್ಯ ಜಯಚಂದ್ರ ಅವರು, ವಿರೋಧ ಪಕ್ಷದ ನಾಯಕರು ವಿಚಾರವನ್ನು ಎತ್ತಿದರು. ಕಾನೂನು ಭಾಗದಲ್ಲಿ ಏನಾದರೂ ಅಡಚಣೆ ಇದ್ದರೆ ನಾನು ನೋಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಡಚಣೆ ಏನೂ ಇಲ್ಲ.

ಅಧ್ಯಕ್ಷರು : ಇದೆ ಅಂತ ಅವರು ಹೇಳಿಲ್ಲ. ಒಂದು ವೇಳೆ ಇರುವುದಾದರೆ ನಾನು ನೋಡುತ್ತೇನೆ ಎಂದು ಅವರು ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು : ನಾನು ಹೇಳುವುದನ್ನು ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೂರು ಆರ್ಡರ್ಗಳ ಪ್ರತಿಗಳಿವೆ.

ಶ್ರೀ ಎಂ.ಸಿ. ನಾಣಯ್ಯ : ವಿರೋಧ ಪಕ್ಷದ ನಾಯಕರೇ, ಯಾವ ಕಾರಣಕ್ಕೋಸ್ಕರ ಚುನಾವಣೆಯನ್ನು ಮುಂದೂಡಿದ್ದಾರೆ ಎನ್ನತಕ್ಕಂಥಾದ್ದು ನನಗೆ ಗೊತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಜಕೀಯ ಕಾರಣಕ್ಕೋಸ್ಕರ.

ಶ್ರೀ ಎಂ.ಸಿ. ನಾಣಯ್ಯ : ರಾಜಕೀಯ ಕಾರಣ ಎಂದು ನೀವು ಹೇಳುತ್ತೀರಿ. ರಾಜಕೀಯ ಕಾರಣ ಇರಲಿಕ್ಕಿಲ್ಲ. ಆದ್ದರಿಂದ ಮಾನ್ಯ ಜಯಚಂದ್ರ ಅವರು ಎತ್ತಿರತಕ್ಕ ವಿಚಾರವನ್ನು ನಾನು ಸಂಬಂಧಪಟ್ಟ ಮಾನ್ಯ ಮಂತ್ರಿಗಳ ಗಮನಕ್ಕೆ ತಂದು ಆ ಚುನಾವಣೆಯನ್ನು ಬೇಗನೆ ನಡೆಸಲಿಕ್ಕೆ ಇರುವ ಕಾನೂನು ಅಡಿಯಲ್ಲಿ ಕ್ರಮ ತೆಗೆದುಕೊಳ್ಳುವುದು ಇದ್ದರೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಮೀರಾಜುದ್ದೀನ್ ಎನ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಕೆ.ಆರ್.ಪೇಟೆ ಮತ್ತು ಬೈರಮಂಗಲದಲ್ಲಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಎಲೆಕ್ಷನ್ ಏನು ಪೋಸ್ಟ್ಪೋನ್ ಆಗಿದೆ ಅದು ಅಲ್ಲಿ ಕಾವೇರಿ ಗಲಾಟೆ ನಡೆಯುತ್ತಿದ್ದುದರಿಂದ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಸಾರಿಯಂತೂ ಏನೂ ಗಲಾಟೆ ಇರಲಿಲ್ಲ. ಎಲ್ಲರೂ ಬಾಯಿ ಮುಚ್ಚಿಕೊಂಡು ಕುಳಿತಿದ್ದಾರೆ. ಮೂರು ಸಾರಿ ಮುಂದೂಡಿಕೆ ಆಗಿದೆ. ಅಲ್ಲಿ ನೋಡಿ ಬೇಕಾದರೆ, ನಾವು ಮೂರು ಆರ್ಡರುಗಳನ್ನು ಕೊಟ್ಟಿದ್ದೇವೆ.

ಶ್ರೀ ಮೀರಾಜುದ್ದೀನ್ ಎನ್. ಪಾಟೀಲ್ : ಈಗ ಅಲ್ಲಿ ವಾತಾವರಣ ಸರಿಯಿಲ್ಲ, ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಬರುತ್ತದೆಂದು ಅಲ್ಲಿ ಶಾಸಕರು ಒಂದು ಅರ್ಜಿಯನ್ನು ಕೊಟ್ಟಿದ್ದರು. ಆದ್ದರಿಂದ ಇದನ್ನು ಪೋಸ್ಟ್ಪೋನ್ ಮಾಡಿ ಎಂದು ಹೇಳಿದ್ದರಿಂದ ನಾವು ಪೋಸ್ಟ್ಪೋನ್ ಮಾಡಿದ್ದವು. ಮತ್ತೆ ಈಗ ವಾತಾವರಣ ಎಲ್ಲಾ ಶಾಂತಿಯುತವಾಗಿರುವುದರಿಂದ, ಎಲೆಕ್ಷನ್ ಮಾಡಬೇಕೆಂಬ ಡೈರೆಕ್ಷನ್ ಅನ್ನು ಡಿ.ಸಿ. ಯವರಿಗೆ ಕೊಟ್ಟಿದ್ದೇವೆ. ಬೇರೆ ಯಾವ ರಾಜಕೀಯ ದೃಷ್ಟಿಯಿಂದಲೂ ಪೋಸ್ಟ್ಪೋನ್ ಮಾಡಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಅವರು ಒಂದು ಸ್ಪಷ್ಟಪಡಿಸಿದ್ದಾರೆ 'Until further orders' ಅಂದರೆ ಇವರಿಗೆ further order ಯಾವಾಗ ಬರಬೇಕು? ಮೂರು ಸಾರಿ ಪೋಸ್ಟ್ಪೋನ್ ಮಾಡಿದ್ದಾರೆ. ಕಾರಣ ಏನು ಹೇಳಿದ್ದಾರೆ ಎಂದರೆ ಕಾವೇರಿ ಗಲಾಟೆ ನಡೆದಿದೆ ಎಂದು ಶಾಸಕರು ಅರ್ಜಿ ಕೊಟ್ಟಿದ್ದರು. ಎಲ್ಲಿ ಗಲಾಟೆ ನಡೆಯಿತು? ಬೆಂಗಳೂರಿನಲ್ಲೇ ಏನೂ ಆಗಿಲ್ಲ.

ಅಧ್ಯಕ್ಷರು : ತಾವು ಕೋ-ಆಪರೇಷನ್ ಮಿನಿಸ್ಟರ್ ಆಗಿದ್ದಾಗ ಬ್ಯಾಂಕಿನದು ಆಗಲಿಲ್ಲವೇ? ತಮಗೆ ಗೊತ್ತಿಲ್ಲವೇ ಏಳು ಸಲ ಮಾಡಿರಲಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಲ್ಲಿ ಅವಕಾಶ ಇತ್ತು. ಇಲ್ಲಿ ಅವಕಾಶ ಇದ್ದರೆ ಮಾಡಿ. ಅಲ್ಲಿ ಸೆಕ್ಷನ್ ಇತ್ತು Government has powers ಹತ್ತು ಸಲ ಮಾಡುವುದಕ್ಕೆ ಕೂಡ ಸರ್ಕಾರಕ್ಕೆ ಪವರ್ಸ್ ಇದೆ. ನೀವು ಇಲ್ಲಿ ಇದ್ದರೆ ಮಾಡಿ ಆದರೆ ಇಲ್ಲಿ ಏನಾಗಿದೆ, ಇದು ಒಂದು ರಾಜಕೀಯ ದುರುದ್ದೇಶದಿಂದ ಮಾಡಿದ್ದು.

ಅಧ್ಯಕ್ಷರು : ಅವರು ಈಗ ಮಾಡುತ್ತೇವೆ ಎಂದು ಹೇಳಿದ್ದಾರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಒಂದು ಸಲ ಅಲ್ಲ, ಎರಡು ಸಲ ಅಲ್ಲ, ಮೂರು ಸಲ ಆಗಿದೆ. ಆಫ್ಟರ್ಆಲ್, ಜೀವರ್ಗಿಯಲ್ಲಿ ಯಾವ ರೀತಿ ಮಾಡಿದ್ದಾರೆ, ಅದೇ ರೀತಿಯಾಗಿ ಮಾಡಿದ್ದಾರೆ.

MR. SPEAKER : I can only tell the Government.

ದಯಮಾಡಿ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಎಲೆಕ್ಷನ್ ಮಾಡಿ ಎಂದು ಹೇಳಬಹುದೇ ಹೊರತು ಇಂತಹ ತಾರೀಖಿಗೆ ನಿಗದಿ ಮಾಡಿ ಎಂದು ನಾನು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಫಿಕ್ಸ್ ಮಾಡಿದ್ದನ್ನು ಪೋಸ್ಟ್ಪೋನ್ ಮಾಡಿದ ಮೇಲೆ... Let him tell 8 days, four days, one week.

ಶ್ರೀ ಮೀರಾಜುದ್ದೀನ್ ಎನ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಪೋಸ್ಟ್ಪೋನ್ ಮಾಡಿದ್ದೇವೆ ಎಂದು ಹೇಳುತ್ತಿದ್ದೇವಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವಾಗ ಮಾಡುತ್ತೀರಿ?

MR. SPEAKER : Please don't waste time. 16 ಜನ ಸ್ಪೀಕರ್ಸ್ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾನೂನು ಪ್ರಕಾರ ಅಲ್ಲಿ ಬರೆದಿದ್ದರೆ, ಕಾನೂನು ಪ್ರಕಾರ ಮಾಡಬೇಕಾಗುತ್ತದೆ. ಆದರೆ ಉದ್ದೇಶಪೂರ್ವಕವಾಗಿ ನೀವು ಪೋಸ್ಟ್ಪೋನ್ ಮಾಡಿದಿರಿ.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೇ, ನಾವು ಚುನಾವಣೆ ಪ್ರಕ್ರಿಯೆಯನ್ನು ಶುರುಮಾಡುತ್ತೇವೆ. ಕಾನೂನಿಗೆ ವಿರೋಧವಾಗಿ ನಾವೇನಾದರೂ ನಡೆದಿದ್ದರೆ ಅದಕ್ಕೆ ಇರತಕ್ಕಂಥ ಅವಕಾಶಗಳು ಬೇರೆ ಇರಬಹುದು. ಆದರೆ ಇದನ್ನು ರಾಜಕೀಯ ಕಾರಣಕ್ಕೋಸ್ಕರ ಮುಂದೂಡಿಲ್ಲ. ಕಾನೂನು ಪ್ರಕಾರ ಮುಂದಿನ ಚುನಾವಣೆ ಪ್ರಕ್ರಿಯೆಯನ್ನು ನಾವು ನಡೆಸುತ್ತೇವೆ. ಈ ಕೆಲಸವನ್ನು ಬೇಗನೆ ಮುಗಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ರಾಜಕೀಯ ಉದ್ದೇಶದಿಂದಲೇ ಮಾಡಿದ್ದು. ಅವರು ಈಗಾಗಲೇ ಹೇಳಿದ್ದಾರೆ. ಎಂ.ಎಲ್.ಎ. ಯವರು ಬರೆದುಕೊಟ್ಟ ಮೇಲೆಯೇ ಈ ರೀತಿಯಾಗಿ ಮಾಡಿದ್ದುದಾಗಿ ಅವರು ಹೇಳಿದ್ದಾರೆ.

ಶ್ರೀ ಎಂ.ಸಿ. ನಾಣಯ್ಯ : ಹಿಂದೆ ಏಳುಸಲ ಎಂಟು ಸಲ ಮುಂದೂಡಿದ್ದರು ಎಂದು ಅಧ್ಯಕ್ಷರೇ ಹೇಳಿದರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಅವಕಾಶ ಇದ್ದುದರಿಂದ ಮಾಡಿದ್ದು. ಅದನ್ನು ತಂದು ಇಲ್ಲಿ ಹೇಳಬೇಡಿ. ನನಗೂ ಗೊತ್ತಿದೆ. ಯಾವ ಸೆಕ್ಷನ್ ಪ್ರಕಾರ ಮಾಡಿದ್ದು ಎಂದು ಇಲ್ಲಿ ತೋರಿಸಿ.

ಅಧ್ಯಕ್ಷರು : ಖರ್ಗೆಯವರೇ .....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇನ್ನೊಬ್ಬರು ಯಾರೋ ಮಾಡಿದ ತಪ್ಪನ್ನು ನೀವು ಇಲ್ಲಿ ಹೇಳುವುದಕ್ಕೆ ಹೋಗಬೇಡಿ.

MR. SPEAKER : They have agreed to do. As per law they will hold the election. ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವಾಗ? ಅದು ಟೈಮ್ ಇದೆ ಅಧ್ಯಕ್ಷರೇ, ಇದು ಉದ್ದೇಶಪೂರ್ವಕವಾಗಿ ಮಾಡಿದ್ದುದು.

ಶ್ರೀ ಮಿರಾಜುದ್ದೀನ್ ಎನ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ಡೈರೆಕ್ಷನ್ಸ್ ಕೊಟ್ಟಿದ್ದೇವೆ ಅದರ ಪ್ರಕಾರ ಡೇಟ್ ಅನೌನ್ಸ್ ಮಾಡಿ ಎಲೆಕ್ಷನ್ ಮಾಡುತ್ತಾರೆ.

SRI M. MALLIKARJUNA KHARGE : There is no provision in the Act. ಆಕ್ಟ್‌ನಲ್ಲಿ ಪ್ರಾವಿಜನ್ ಇದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ನೀವು ಹತ್ತು ಸಾರಿ ಮಾಡಿ.

ಅಧ್ಯಕ್ಷರು : ಆಯಿತು. Please see that it does not come up.

SRI M.C. NANAIAH : It will be done in accordance with the rules

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದು ಪೋಸ್ಟ್‌ಪೋನ್ ಮಾಡುವುದಕ್ಕೆ ರೂಲ್ಸೇ ಇಲ್ಲವಲ್ಲ.

SRI M.C. NANAIAH : If that is the case, the aggrieved party can always agitate the matter elsewhere.. As at the moment the Hon.Minister has said: there was certain law and order problem. Hence it was postponed. Now a direction has already been issued to the Deputy Commissioner and election will be held according to the rules.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ತಮಗೆ ಮೂರೂ ಕಾಗದಗಳನ್ನು ಕೊಟ್ಟಿದ್ದೇನೆ.

MR. SPEAKER : I do not want the time of the House to be consumed over such matter.

ಅವರು ಹೇಳಿದ್ದಾರೆ. I have to trust the Government ದಯಮಾಡಿ ಸಹಕರಿಸಬೇಕು. ಹದಿನಾರು ಜನ ಸ್ಪೀಕರ್ಸ್‌ನ್ನು ನಾನು ಅಕಾಮಡೇಟ್ ಮಾಡಬೇಕು. Tomorrow is the reply. Kindly save the time of the House.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೂರು ಸಲ ಮುಂದಕ್ಕೆ ಹಾಕಿದರೆ ಏನು ಇದರ ಅರ್ಥ?

MR. SPEAKER : They are telling, we will hold the elections ಎಂದು ಅವರು ಹೇಳುತ್ತಿದ್ದಾರಲ್ಲ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕಾನೂನನ್ನು ಉಲ್ಲಂಘನೆ ಮಾಡಿ ಮಾಡುವುದು ಎಂದರೆ ಹೇಗೆ?

MR. SPEAKER : They are telling, ಅವರು ನಾವು ಕಾನೂನು ಪ್ರಕಾರ ಮಾಡುತ್ತೇವೆ, ನಾವು ಚುನಾವಣೆ ನಡೆಸುತ್ತೇವೆ ಎಂದು ಹೇಳಿದ ಮೇಲೆ ನಾನು ಇನ್ನೇನು ಅವರಿಗೆ ಹೇಳಲಿ? As per rules, ನಾವು ಚುನಾವಣೆ ನಡೆಸುತ್ತೇವೆ ಎಂದು ಹೇಳುತ್ತಿದ್ದಾರಲ್ಲ.

SRI M. MALLIKARJUNA KHARGE : They have not done ಎಂದು ನಾನು ಹೇಳುತ್ತಿದ್ದೇನೆ. ಯಾವ ರೂಲ್ಸ್ ಪ್ರಕಾರ ಮಾಡಿದ್ದಾರೆ ಎಂದು ಹೇಳಲಿ. Minister is also here. He is the law Minister. ಈಗ ನನಗೆ ನೀವು ಕೋ-ಆಪರೇಟಿವ್‌ನಲ್ಲಿ ಮಾಡಿದ್ದರು ಎಂದು ಹೇಳಿದಿರಲ್ಲ, ನನಗೆ ಹಿಂದೆ ಸೆಕ್ಷನ್ 110ರಲ್ಲಿ ಅಥಾರಿಟಿ ಇತ್ತು, ನಾನು ಮಾಡಿದೆ. ಒಂದು ಸಲ ಅಲ್ಲ, ಹತ್ತು ಸಲ ಮಾಡಿದೆ.

MR. SPEAKER : As Speaker I do not want to get into that controversy. Unfortunately, I am not an ordinary Member. Other-wise I could have educated the House on that issue. That is a different thing. I am deprived of tha privilege today, as Speaker, let me not go into that as to what happened then, that is the history.

SRI M.C. NANAIAH : Election will be held and direction has already been issued and all process will be started immediately.

ಅಧ್ಯಕ್ಷರು : ತಾವು ದಯಮಾಡಿ ಆ ಹಾಸ್ಟೆಲ್ಸ್ ವಿಚಾರದಲ್ಲಿ ಹೇಳಿ.

ಋ) ಬಿಜಾಪುರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಕ್ಕೆ ಸೇರಿದ ಹಾಸ್ಟೆಲ್‌ಗಳನ್ನು ರದ್ದು ಮಾಡಿರುವುದು.

+ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ಬಿಜಾಪುರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿದಂಥ ಹಾಸ್ಟೆಲ್‌ಗಳನ್ನು ರದ್ದು ಮಾಡಿದ್ದಾರೆ. ಅವರ ಸರ್ಕಾರಿ ಆಜ್ಞೆ ಸಕಾಇ 131 ಪಕಕ 95 ದಿನಾಂಕ 6.7.96 ರಂದು 13 ಅನುದಾನಿತ ವಿದ್ಯಾರ್ಥಿನಿಯಗಳ ಮಂಜೂರಾತಿಯನ್ನು ವಜಾ ಮಾಡಲಾಗಿದೆ. ಇವುಗಳಲ್ಲಿ ಬಹಳಷ್ಟು ವಿದ್ಯಾರ್ಥಿನಿಲಯಗಳು ಲಂಬಾಣಿ ಜನಾಂಗಕ್ಕೆ ಸೇರಿದಂಥವುಗಳು. ಇದು ಆಗಿರುವುದು. 6.7.96 ರಂದು ಇನ್ನೊಂದು ಸಕಇ 56 ಪಸ 95 ಬೆಂಗಳೂರು, ದಿನಾಂಕ 29.7.95 ಮತ್ತೊಂದು 16 ವಿದ್ಯಾರ್ಥಿನಿಲಯಗಳ ಮಂಜೂರಾತಿಯನ್ನು ರದ್ದುಮಾಡಿದ್ದಾರೆ. ಮತ್ತೆ ಮೂರು ವಸತಿನಿಲಯಗಳ ಸಂಖ್ಯಾಬಲವನ್ನು ಕಡಿಮೆ ಮಾಡಿದ್ದಾರೆ. ಅಂದರೆ ಬಿಜಾಪುರದ ಒಂದೇ ಜಿಲ್ಲೆಯ 29 ಹಾಸ್ಟೆಲ್‌ಗಳನ್ನು ರದ್ದು ಮಾಡಿದ್ದಾರೆ. ಈ ವಸತಿ ನಿಲಯಗಳು ಕಾನೂನಿಗೆ ವಿರುದ್ಧವಾಗಿ ಮೂಲಭೂತ ಸೌಕರ್ಯಗಳನ್ನು ಹೊಂದಿಲ್ಲದ ಕಾರಣ ವಜಾ ಮಾಡಿದ್ದೇವೆ ಎಂದು ಹೇಳಿ ಕಾರಣ ಕೊಟ್ಟಿದ್ದಾರೆ. ನಾನು ವಿನಂತಿ ಮಾಡುತ್ತೇನೆ, ತಾವು ನೋಡಿ. ಈ ಹಾಸ್ಟೆಲುಗಳಲ್ಲಿ ವ್ಯವಸ್ಥೆ ಸರಿಯಿಲ್ಲದಿದ್ದರೆ ಒಂದು ನೋಟೀಸ್ ಕೊಡಿ. ಒಂದೂ ನೋಟೀಸ್ ಕೊಡದೇನೆ ಸುಮಾರು 29 ಹಾಸ್ಟೆಲ್‌ಗಳನ್ನು ಬಹುತೇಕ ಬಣಜಾರ ಸಮಾಜಕ್ಕೆ ಸೇರಿದಂಥ ಹಾಸ್ಟೆಲ್‌ಗಳನ್ನು ತಾವು ರದ್ದುಮಾಡಿದ್ದೀರಿ. ನನ್ನದು ಇಷ್ಟೇ ವಿನಂತಿ. ನಾನು ಬಿಜಾಪುರ ಜಿಲ್ಲೆಯಲ್ಲಿ ಪ್ರವಾಸ ಮಾಡಿದಾಗ, ನಿಜಕ್ಕೂ ನನಗೆ ನಿಮ್ಮ ಆಡಳಿತ ರೀತಿ ನೋಡಿ ತಲೆತಗ್ಗಿಸುವಂತಾಯಿತು. ನಿಮ್ಮದು ಆಡಳಿತ ಪಕ್ಷ, ನನ್ನದು ವಿರೋಧ ಪಕ್ಷ ಎಂದು ನನಗೆ ಅನ್ನಿಸಲಿಲ್ಲ. ಇದು ಸಾಧ್ಯವೇ ಎಂದು ಒಂದು ವೇಳೆ ಸರ್ಕಾರ ಸೇಡುತೀರಿಸಿ ಕೊಳ್ಳುತ್ತಿದೆಯೇನೋ ಎನ್ನುವ ಭಾವನೆ ಬರುತ್ತದೆ. ದಯವಿಟ್ಟು ಅವರಿಗೆ ಹಾಸ್ಟೆಲ್‌ಗಳನ್ನು ಪ್ರಾರಂಭಿಸಲಿಕ್ಕೆ ಹೇಳಿ ಮತ್ತು ನೋಟೀಸ್ ಕೊಡಿ. ತಪ್ಪಾಗಿದ್ದರೆ ಸರಿಪಡಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಮಂತ್ರಿ) : ಸನ್ಮಾನ್ಯ ಅಧ್ಯಕ್ಷರೇ, ಈ ಅನುದಾನ ಪಡೆಯುವ ವಸತಿ ನಿಲಯಗಳಿಗೆ ಕೆಲವು ನಿಬಂಧನೆಗಳಿವೆ. ಒಳ್ಳೆಯ ವಸತಿ ಇರಬೇಕು, ನೀರು ಇರಬೇಕು, ತಟ್ಟೆಇರಬೇಕು, ನೌಕರರು ಕೂಡ ಸ್ವಲ್ಪ ವಿದ್ಯಾರ್ಹತೆಯನ್ನು ಹೊಂದಿರಬೇಕು ಎನ್ನತಕ್ಕಂಥಾದ್ದು ಇದೆ. ನಮ್ಮ ಅಧಿಕಾರಿಗಳು ಇನ್‌ಸ್ಪೆಕ್ಷನ್‌ಗೆ ಹೋದಾಗ ಸಂಪೂರ್ಣವಾಗಿ ಕೇವಲ 13 ಅಲ್ಲ, 29 ಹಾಸ್ಟೆಲ್‌ಗಳನ್ನು ರದ್ದು ಮಾಡತಕ್ಕಂಥ ಒಂದು ಲಿಸ್ಟ್ ಕಳುಹಿಸಿದ್ದಾರೆ. ಅಲ್ಲಿ ಸರಿಯಾದ ವಸತಿ ಇಲ್ಲ, ನೌಕರರು ಇಲ್ಲ ತಟ್ಟೆ ಇಲ್ಲ, ವಿದ್ಯಾರ್ಥಿಗಳು ಕೂಡ ಅಲ್ಲಿ ಸರಿಯಾದ ರೀತಿಯಲ್ಲಿ ಇಲ್ಲ, ಊಟ ಮಾಡಿ ಬೇರೆ ಕಡೆಗೆ ಹೋಗುತ್ತಾರೆ, ಕೆಲವು ಕಡೆ ವಿದ್ಯಾರ್ಥಿಗಳೇ ಇಲ್ಲ. ಆದರೆ ಅನುದಾನ ಪಡೆಯುವುದಕ್ಕೋಸ್ಕರ ಅಲ್ಲೆಲ್ಲ ಲೆಕ್ಕ ಬರೆಯುತ್ತಾರೆ ಎನ್ನತಕ್ಕಂಥ ಒಂದು ಮಾಹಿತಿ ಬಂದಿದೆ. ಇದಕ್ಕೆ ಏನು ಮಾಡಬೇಕು? ಈಗ ಏನಾದರೂ ಅವರೇ ಒಂದು ಅರ್ಜಿಕೊಟ್ಟರೆ ಇದು ಸರಿಯಾಗಿ ನಡೆಯುತ್ತಿದೆ